# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 1391/2022

| | | |
|---|---|---|
| ಸಾಕ್ಷಿದಾರರ ಹೆಸರು | – ನಾಗರಾಜ್ | ಡಿ.ಡಬ್ಲ್ಯೂ–1 |
| ತಂದೆಯ/ಗಂಡನ ಹೆಸರು | – ತಿಮಾಬೋವಿ | |
| ವಯಸ್ಸು | – ಸು. 42 ವರ್ಷ | ಪ್ರ.ವ.ಬೋ<br>ದಿನಾಂಕ:10.06.2024 |
| ಉದ್ಯೋಗ | – ವ್ಯವಸಾಯ | |
| ವಾಸ | – ಭೂತಯ್ಯನಹಟ್ಟಿ ಗ್ರಾಮ | |

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಆರ್.ಟಿ.ಎಸ್. ವಕೀಲರಿಂದ:–**

ಈ ಪ್ರಕರಣದ ದೂರುದಾರರು ನನಗೆ ನೇರವಾಗಿ ಪರಿಚಯ ಇರುವುದಿಲ್ಲ. ರಘುಕುಮಾರ್ ರವರು ಪೊಲೀಸ್ ವೆಂಕಟೇಶ್‌ರವರ ಮನೆಯಲ್ಲಿ ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ನಾನು ಸದರಿ ಪೊಲೀಸ್‌ರ ಮನೆಯಲ್ಲಿ ಊಟ ತೆಗೆದುಕೊಂಡು ಹೋಗುವುದು ಮತ್ತು ಬರುವುದು ಮತ್ತೆ ಬೇರೆ ಕೆಲಸವನ್ನೂ ಸಹ ಮಾಡುತ್ತಿದ್ದೆ. 2019 ರಲ್ಲಿ ನನ್ನ ಮಗಳಿಗೆ ಶಾಲೆಯ ಶುಲ್ಕ ಭರಿಸಲು ಹಣದ ಅವಶ್ಯಕತೆ ಉಂಟಾಗಿತ್ತು. ಆಗ ನಾನು ವೆಂಕಟೇಶ್‌ರವರ ಬಳಿ ರೂ.1,00,000/– ಹಣ ಕೇಳಿದ್ದೆ. ಆಗ ವೆಂಕಟೇಶ್‌ರವರು ಸದರಿ ರೂ.1,00,000/– ಹಣವನ್ನು ನಗದು ರೂಪದಲ್ಲಿ ನೀಡಿದ್ದರು. ಆ ಸಮಯದಲ್ಲಿ ನನ್ನ ಬಳಿ ಭದ್ರತೆಗಾಗಿ ಒಂದು ಚೆಕ್‌ನ್ನು ಪಡೆದಿದ್ದರು.

ನಂತರ ಒಂದು ವರ್ಷದ ಒಳಗಾಗಿ ನಾನು ಹಣವನ್ನು ವೆಂಕಟೇಶ್‌ರವರಿಗೆ ಮರಳಿ ನೀಡಿರುತ್ತೇನೆ. ಹಣ ನೀಡಿದ ನಂತರ ನನ್ನ ಚೆಕ್‌ನ್ನು ಮರಳಿ ಕೊಡಲು ಕೇಳಿದೆನು. ಆಗ ವೆಂಕಟೇಶ್‌ರವರು ನನ್ನ ಮನೆ ಕೆಲಸ ಏಕೆ ಬಿಟ್ಟಿದ್ದೀಯ, ನಾನು ಚೆಕ್ ಮರಳಿ ಕೊಡುವುದಿಲ್ಲ, ಜಮೀನು ಕೊಡು ಇಲ್ಲವಾದರೆ ರೂ.10,00,000/– ಹಣ ಕೊಡು ಎಂದು ಕೇಳಿದರು. ನಾನು ಹಣ

ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ತುಂಬಾ ಗಲಾಟೆ ಮಾಡಿದರು. ಅದಕ್ಕೆ ನಾನು ಅವರ ಮನೆ ಕೆಲಸ ಬಿಟ್ಟೆ ದೂರುದಾರರೊಂದಿಗೆ ನಾನು ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ. ನಾನು ದೂರುದಾರರಿಗೆ ಯಾವುದೇ ಹಣ ಕೊಡಲು ಬಾಧ್ಯಸ್ಥನಿರುವುದಿಲ್ಲ. ಆದ ಕಾರಣ ನನ್ನ ಮೇಲಿರುವ ಕೇಸನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಪಾಟೀ-ಸವಾಲುಃ ದೂರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.